ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ
ನ್ಯಾಯಾಲಯ,ಮಂಡ್ಯ,(ಆಸೀನ ಶ್ರೀರಂಗಪಟ್ಟಣ)

ಸತ್ರ ಪ್ರಕರಣ ಸಂಖ್ಯೆಃ 5048/2022

ಪ್ರಾ ಸಾ 12 ಚಾ ಸಾ 10

ಹೆಸರುಃ ಪಿ ರಾಜು

ತಂದೆಯ ಹೆಸರುಃ ಪಾಪಯ್ಯ

ವಯಸ್ಸುಃ 53 ವರ್ಷ

ಉದ್ಯೋಗಃ ನಂದಿನಿ ಪಾರ್ಲರ್

ವಾಸಃ ಕೆ ಆರ್ ಸಾಗರ .

ಸಾಕ್ಷಿಯನ್ನು ದಿಃ 06.01.2024 ರಂದು ಸಾಕ್ಷಿಯನ್ನು ಕರೆಸಿ
ಪ್ರಮಾಣ ವಚನ ಬೋಧಿಸಲಾಯ್ತು.

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-

1. ನನಗೆ ಗಂಗಾರಾಮು ಮತ್ತು ಆತನ ಹೆಂಡತಿ ಲಕ್ಷ್ಮಿ ಗೊತ್ತು . ಅವರು ನಾವು ವಾಸ ಮಾಡುತ್ತಿರುವ ಬಜಾರ್ ಲೈನ್‌ನಲ್ಲಿಯೇ ವಾಸ ಮಾಡುತ್ತಿದ್ದರು.

2. ಸುಮಾರು 2 ವರುಷ ಒಂದು ದಿವಸದ ಹಿಂದೆ ಸದರಿ ಲಕ್ಷ್ಮಿ ಮತ್ತು ಆಕೆಯ ಮೂರು ಜನ ಮಕ್ಕಳು ಮತ್ತು ಆಕೆಯ ಸಂಬಂಧಿಕರ ಮಗ ಅಂದರೆ ಒಟ್ಟು 5

ಜನರು ಗಂಗಾರಾಮುವಿನ ಮನೆಯಲ್ಲಿ ಕೊಲೆಯಾಗಿರುತ್ತಾರೆ.

3. ನನ್ನ ಮನೆಗೆ ನಾನು ಸಿ ಸಿ ಕ್ಯಾಮೆರಾವನ್ನು ಅಳವಡಿಸಿರುತ್ತೇನೆ.

4. ಸದರಿ 5 ಜನರ ಕೊಲೆಯಾದ ನಂತರದಲ್ಲಿ ಕೆ ಆರ್ ಸಾಗರ ಪೊಲೀಸರು ಬಜಾರ್ ಲೈನ್ ರಸ್ತೆಯಲ್ಲಿ ಯಾರ ಯಾರ ಮನೆಯಲ್ಲಿ ಸಿ ಸಿ ಕ್ಯಾಮೆರಾಗಳಿವೆ ಮತ್ತು ಆ ರಸ್ತೆಯಲ್ಲಿ ಯಾರು ಯಾರು ಓಡಾಡಿದ್ದಾರೆ ಎಂದು ಕಂಡುಹಿಡಿಯುವ ಸಲುವಾಗಿ ಸಿ ಸಿ ಕ್ಯಾಮೆರಾದ ದೃಶ್ಯಾವಳಿಗಳನ್ನು ನೋಡಲು ನನ್ನ ಮನೆಗೆ ಬಂದಿದ್ದರು.

5. ಆ ರೀತಿ ಬಂದ ಪೊಲೀಸರು ಸಿ ಸಿಕ್ಯಾಮೆರಾದ ದೃಶ್ಯಾವಳಿಗಳನ್ನು ಪರೀಶೀಲಿಸಿ ಅದರಲ್ಲಿ ಲಕ್ಷ್ಮಿಯ ಚಲನವಲನ ಇದೆ ಎಂದು ಹೇಳಿ ಹೊರಟು ಹೋದರು.

6. ಆನಂತರ ದಿಃ 11.2.2022 ರಂದು ಮೃತ ಲಕ್ಷ್ಮಿಯ ಗಂಡ ಗಂಗಾರಾಮುವಿನ ಜೊತೆಯಲ್ಲಿ ಪೊಲೀಸ್ ಇನ್ಸ್ ಪೆಕ್ಟರ್ ಮತ್ತು ಇಬ್ಬರು ಸರಕಾರಿ ಅಧಿಕಾರಿಗಳೊಂದಿಗೆ ಮದ್ಯಾಹ್ನ 3 ಗಂಟೆಗೆ ನನ್ನ ಮನೆಗೆ

ಸಿ ಸಿ ಕ್ಯಾಮೆರಾದ ದೃಶ್ಯಾವಳಿಗಳನ್ನು ಪರಿಶೀಲಿಸುವ ಸಲುವಾಗ ಬಂದಿದ್ದರು.

7. ನಾನು ಬಜಾರ್ ಲೈನ್ ನಲ್ಲಿರುವ ನನ್ನ ಮನೆಯ ಮೊದಲನೆ ಮಹಡಿಯಲ್ಲಿ ಸಿಸಿಕ್ಯಾಮೆರಾಕ್ಕೆ ಸಂಬಂಧಪಟ್ಟ ಟಿ ವಿ ಮತ್ತು ರಿಸೀವರ್ ಅನ್ನು ಇಟ್ಟಿದ್ದೆ. ನನ್ನ ಮನೆಗೆ 3 ಸಿ ಸಿ ಕ್ಯಾಮೆರಾಗಳನ್ನು ಅಳವಡಿಸಿದ್ದೆ. ನನ್ನ ಮನೆಯ ಪ್ರವೇಶ ದ್ವಾರ ಪೂರ್ವ ದಿಕ್ಕಿಗೆ ಇದೆ. ಅಲ್ಲಿ ವಾಣಿವಿಲಾಸ ರಸ್ತೆ ಇದೆ, ಆ ರಸ್ತೆ ಮತ್ತು ನನ್ನ ಮನೆಯ ಪ್ರವೇಶ ಕಾಣಿಸುವಂತೆ ಒಂದು ಸಿ ಸಿ ಕ್ಯಾಮೆರಾವನ್ನು ಅಳವಡಿಸಿದೆ. ಇನ್ನೊಂದು ಕ್ಯಾಮೆರಾವನ್ನು ನನ್ನ ಮನೆ ಸೇರಿದಂತೆ ಉತ್ತರ ದಿಕ್ಕಿಗೆ ಅಂದರೆ ಬಜಾರ್ ಲೈನ್ ರಸ್ತೆ ಕಾಣುವಂತೆ ಇಡಲಾಗಿತ್ತು. ಇನ್ನೊಂದು ನನ್ನ ಮನೆ ಸೇರಿದಂತೆ ದಕ್ಷಿಣ ದಿಕ್ಕಿನಲ್ಲಿ ಬಜಾರ್ ಲೈನ್ ರಸ್ತೆ ಕಾಣುವಂತೆ ಅಳವಡಿಸಲಾಗಿತ್ತು.

8. ನನ್ನ ಮನೆಯ ಪೂರ್ವ ದಿಕ್ಕಿಗೆ ಅಳವಡಿಸಲಾದ ಕ್ಯಾಮೆರಾದಲ್ಲಿ ಬೆಳಗ್ಗೆ 5.02 ನಿಮಿಷದಿಂದ 5.03 ನಿಮಿಷದ ಸಮಯದಲ್ಲಿ ಒಬ್ಬಳು ಹೆಂಗಸು ಒಂದು ಬ್ಯಾಗು ಹಿಡಿದುಕೊಂಡು ಅರಳಿಮರದ ಸರ್ಕಲ್ ಕಡೆಗೆ ಹೋಗುತ್ತಿದ್ದ ದೃಶ್ಯ ಕಂಡುಬಂತು. ಆ ದೃಶ್ಯಾವಳಿ ದಿಃ

6.2.22ರ ಬೆಳಗ್ಗೆ 5.02 ನಿಮಿಷದಿಂದ 5.03 ನಿಮಿಷಕ್ಕೆ ಸಂಬಂಧಪಟ್ಟಿದ್ದಾಗಿತ್ತು. ಆ ಹೆಂಗಸು ಲಕ್ಷ್ಮೀ ಎಂದು ಮೃತಲಕ್ಷ್ಮೀಯ ಗಂಡ ಗಂಗಾರಾಮು ಗುರುತಿಸಿದರು. ಆ ದೃಶ್ಯಾವಳಿಯನ್ನು ಅಧಿಕಾರಿಗಳು ಪೆನ್ ಡ್ರೈವ್ ಮೂಲಕ ಸಂಗ್ರಹಿಸಿಕೊಂಡರು. ಆ ಪೆನ್ ಡ್ರೈವ್ ಅನ್ನು ಅಮಾನತ್ತು ಪಡಿಸಿಕೊಂಡು ಹೆಚ್ ಎಂಬ ಅಕ್ಷರದಿಂದ ಮೊಹರು ಮಾಡಿದರು. ಸದರಿ ಪೆನ್ ಡ್ರೈವ್ ಈಗ ನೋಡಿದ ನಿಪಿ 5 ಆಗಿದೆ.

9. ಆ ರೀತಿ ನಿಪಿ 5 ರ ಪೆನ್ ಡ್ರೈವ್ ಅಮಾನತ್ತು ಪಡಿಸಿಕೊಳ್ಳುವ ಸಂದರ್ಭದಲ್ಲಿ ಪೊಲೀಸರು ನನ್ನ ಮನೆಯಲ್ಲಿ ಲ್ಯಾಪ್ ಟಾಪ್ ಮುಖೇನ ಮಹಜರು ತಯಾರಿಸಿದ್ದಾರೆ . ಅದಕ್ಕೆ ನಾನು ರುಜು ಮಾಡಿದ್ದೇನೆ. ಸಾಕ್ಷಿ ಗುರುತಿಸಿದ ದಾಖಲೆಯನ್ನು ಈಗಾಗಲೇ ನಿಪಿ 4 ಎಂದು ಗುರುತಿಸಲಾಗಿದ್ದು ಸಾಕ್ಷಿಯ ರುಜುವನ್ನು ನಿಪಿ 4 ಬಿ ಎಂದು ಗುರುತಿಸಲಾಯಿತು.

10. ಆ ರೀತಿ ಪೊಲೀಸರು ಬಂದು ನನ್ನ ಮನೆಯಲ್ಲಿ ದೃಶ್ಯಾವಳಿಗಳನ್ನು ಪರಿಶೀಲಿಸಿ ಪೆನ್‌ಡ್ರೈವ್‌ನಲ್ಲಿ ಸಂಗ್ರಹಿಸಿಕೊಳ್ಳುವಾಗ ತೆಗೆದಿರುತ್ತಾರೆ. ಸದರಿ ಪೊಟೋಗಳು ಈಗ ನೋಡಿದ ನಿಪಿ 6 ಆಗಿದೆ.

11. ಈ ಸಂಬಂಧವಾಗಿ ನಾನು ಪೊಲೀಸರಿಗೆ ಹೇಳಿಕೆಯನ್ನು ಕೊಟ್ಟಿರುತ್ತೇನೆ.

ಪಾಟೀ ಸವಾಲುಃ ಆರೋಪಿಗಳ ಪರವಾಗಿ ಃ ಶ್ರೀ ಎಸ್ ಆರ್ ಎಸ್ ವಕೀಲರಿಂದಃ

12. ಘಟನೆಗಿಂತ ಸುಮಾರು ಎರಡು ವರುಷಗಳ ಹಿಂದೆ ನಾನು ನನ್ನ ಮನೆಗೆ ಸಿ ಸಿ ಕ್ಯಾಮೆರಾವನ್ನು ಅಳವಡಿಸಿದ್ದೆ.

13. 11 ನೇ ತಾರೀಖಿಗಿಂತ ಎರಡು ದಿನಗಳ ಹಿಂದೆ ಪೊಲೀಸರು ನನ್ನ ಮನೆಗೆ ಬಂದು ಸಿ ಸಿ ಕ್ಯಾಮೆರಾದ ದೃಶ್ಯಾವಳಿಗಳನ್ನು ನೋಡಿಕೊಂಡು ಹೋಗಿರುತ್ತಾರೆ . ಆದರೆ ಆ ಸಂದರ್ಭದಲ್ಲಿ ನಾನು ಇರಲಿಲ್ಲ , ನನ್ನ ತಂದೆ ಇದ್ದರು.

14. ನನ್ನ ಮನೆಗೆ ಅಳವಡಿಸಿದ ಸಿ ಸಿ ಕ್ಯಾಮೆರಾಗಳ ಸಾಮರ್ಥ್ಯ ನನಗೆ ತಿಳಿದಿರುವುದಿಲ್ಲ. ನನ್ನ ಮನೆಯ ಮುಂಭಾಗದಲ್ಲಿ ಮುಖ್ಯ ರಸ್ತೆ, ದೇವಸ್ಥಾನ ಮತ್ತೆ ಒಂದು ಉದ್ಯಾನವನ ಇದೆ ಎನ್ನುವುದು ಸರಿ. ಆ ರಸ್ತೆ ಮತ್ತು ದೇವಸ್ಥಾನ ಆದ ನಂತರದಲ್ಲಿ ಇನ್ನೊಂದು ರಸ್ತೆ ಇದೆ ಎನ್ನುವುದು ಸರಿ .

15. ಗಂಗಾರಾಮುನ ಮನೆಗೆ ನನ್ನ ಮನೆಯ ಮುಂದೆ ಇರುವ ರಸ್ತೆಯಿಂದಲೂ ಹೋಗಬಹುದು ಅಥವಾ ಆಂಜನೇಯ

ಸ್ವಾಮಿ ದೇವಸ್ಥಾನದ ಮುಂಭಾಗದ ರಸ್ತೆಯಿಂದಲೂ ಹೋಗಬಹುದು.

16. ನನ್ನ ಮನೆಯ ಮುಂಭಾಗದ ರಸ್ತೆಯಲ್ಲಿ ಗಂಗಾರಾಮುವಿನ ಮನೆಗೆ ಹೋಗಬೇಕಾದರೆ ಬಳಸಿಕೊಂಡು ಹೋಗಬೇಕು ಎನ್ನುವುದು ಸರಿ . ಸಾಕ್ಷಿ ಸ್ವತಃ ಎರಡೂ ರಸ್ತೆಯಿಂದ ಹೋದರೂ ಸಮಾನ ರೀತಿಯ ಅಂತರ , ಎರಡೂ ರಸ್ತೆಯಿಂದಲೂ ಹೋಗಬಹುದು ಎಂದು ಉತ್ತರಿಸಿದ್ದಾರೆ.

17. ನನ್ನ ಮನೆಯ ಮುಂದಿನ ರಸ್ತೆಯಿಂದ ಹೋದರೆ ಒಂದು ಯೂ ಟರ್ನ್ ಪಡೆದುಕೊಳ್ಳಬೇಕು ಎನ್ನುವುದು ನಿಜ . ಆ ಯೂಟರ್ನ್ ಜಾಗದಲ್ಲಿ ಗುಣಶೇಖರ ರವರಿಗೆ ಸೇರಿದ ಮನೆ ಇದೆ ಎನ್ನುವುದು ಸರಿ. ಸದರಿ ಮನೆಯಲ್ಲಿ ಸಿ ಸಿ ಕ್ಯಾಮೆರಾದ ವ್ಯವಸ್ಥೆ ಇರುವುದನ್ನು ನಾನು ಗಮನಿಸಿಲ್ಲ. ನನ್ನ ಮನೆಯ ಮುಂದಿನ ರಸ್ತೆಗೆ ಸಂಬಂಧಪಟ್ಟಂತೆ ನನ್ನ ಮನೆಯಲ್ಲಿ ಬಿಟ್ಟರೆ ಬೇರೆ ಮನೆಯಲ್ಲಿ ಸಿ ಸಿ ಕ್ಯಾಮೆರಾದ ವ್ಯವಸ್ಥೆ ಇರುವುದಿಲ್ಲ. ಗುಣಶೇಖರರವರ ಮನೆಯಲ್ಲಿ ಸಿಸಿಕ್ಯಾಮೆರಾದ ವ್ಯವಸ್ಥೆ ಇದೆ ಎಂದರೆ ಇದ್ದರೂ ಇರಬಹುದು, ನಾನು ಗಮನಿಸಿಲ್ಲ.

18. ನನ್ನ ಮನೆಯ ಮುಂದಿರುವ ರಸ್ತೆ ಮತ್ತು ನನ್ನ ಮನೆಯ

ಮುಂದಿನ ದೇವಸ್ಥಾನದ ಆದ ನಂತರದ ರಸ್ತೆ ಮುಂದುವರೆದು ಗುಣಶೇಖರ್ ರವರ ಮನೆಯ ಬಳಿ ಕೂಡುತ್ತವೆ ಎನ್ನುವುದು ಸರಿ .

19. ನನ್ನ ಮನೆಗೆ ಬರುವುದಕ್ಕಿಂತ ಪೂರ್ವದಲ್ಲಿ ಪೊಲೀಸರು ನನಗೆ ಲಿಖಿತ ನೋಟಿಸನ್ನು ಕೊಟ್ಟಿರುವುದಿಲ್ಲ. ಪೊಲೀಸ್ ನಿರೀಕ್ಷಕರ ಜೊತೆ ಬಂದ ಇತರೇ ಸರಕಾರಿ ಅಧಿಕಾರಿಗಳು ಯಾರು ಎಂದು ನಾನು ತಿಳಿದುಕೊಂಡಿಲ್ಲ.

20. ನನ್ನ ಸಿ ಸಿ ಕ್ಯಾಮೆರಾವು ಒಂದು ತಿಂಗಳ ಬ್ಯಾಕ್‌ಅಪ್ ಅನ್ನು ಹೊಂದಿರುವ ಸಾಮರ್ಥ್ಯದ ಕ್ಯಾಮೆರಾವಾಗಿತ್ತು. ಪೊಲೀಸರು ಯಾವ ತಾರೀಖಿನಿಂದ ಯಾವ ತಾರೀಖಿನವರೆಗಿನ ದೃಶ್ಯಾವಳಿಗಳನ್ನು ಪರಿಶೀಲನೆ ಮಾಡಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ.

21. ಪೊಲೀಸರು ದಿಃ 6.2.22 ರ ಬೆಳಗಿನ ಜಾವ 5 ಗಂಟೆ 02 ನಿಮಿಷದಿಂದ 5 ಗಂಟೆ 03 ನಿಮಿಷದವರೆಗಿನ ದೃಶ್ಯಾವಳಿಗಳನ್ನು ಸಂಗ್ರಹಿಸಿಕೊಂಡಿದ್ದಾರೆ .

22. 5 ಗಂಟೆ 02 ನಿಮಿಷದಿಂದ 5 ಗಂಟೆ 03 ನಿಮಿಷದವರೆಗಿನ ಯಾವುದೇ ದೃಶ್ಯಾವಳಿಗಳನ್ನು ಪೊಲೀಸರು ಪಡೆದುಕೊಂಡಿಲ್ಲ ಎನ್ನುವುದು ಸರಿಯಲ್ಲ.

23.ಮನೆಯ ಪೂರ್ವ ದಿಕ್ಕಿಗೆ ಅಳವಡಿಸಲಾದ ಕ್ಯಾಮೆರಾವನ್ನು ಮನೆಯ ಮೊದಲ ಮಹಡಿಯಲ್ಲಿ ಈಶಾನ್ಯದಿಕ್ಕಿನಿಂದ ಪೂರ್ವಕ್ಕೆ ಆದಂತೆ ಬಾಗಿಲ ಬಳಿ ಅಳವಡಿಸಿದ್ದೇನೆ. ಸಿ ಸಿ ಕ್ಯಾಮೆರಾ ಇರುವ ಜಾಗದಿಂದ ರಸ್ತೆಗೆ ಅಂದಾಜು 15 ಅಡಿ ಅಂತರ . ನನ್ನ ಮನೆಯ ಮುಂದೆ ಖಾಲಿ ಜಾಗ ಇರುವುದಿಲ್ಲ. ನನ್ನ ಮನೆಗೆ ಅಳವಡಿಸಲಾದ ಸಿ ಸಿ ಕ್ಯಾಮೆರಕ್ಕೂ ಮತ್ತು ರಸ್ತೆಗೂ ನಡುವೆ 200 ಅಡಿಯ ಅಂತರ ಇದೆ ಎನ್ನುವುದು ಸುಳ್ಳು.

24. ಇನ್ನೊಂದು ಕ್ಯಾಮೆರಾವನ್ನು ಮನೆಯ ಪೋರ್ಟಿಕಾ ದ ಬಳಿ ಅಳವಡಿಸಿರುತ್ತೇನೆ. ಮೂರು ಕ್ಯಾಮೆರಾಗಳನ್ನು ನಾನು ಬಜಾರ್ ಲೈನ್‌ನ ದೃಶ್ಯಾವಳಿಗಳನ್ನು ಸೆರೆ ಹಿಡಿಯುವ ರೀತಿಯಲ್ಲಿ ಅಳವಡಿಸಿದ್ದೇನೆ. ಸದರಿ ಮೂರು ಕ್ಯಾಮೆರಾಗಳಲ್ಲೂ ಕೂಡ ಆ ಮಹಿಳೆ ಹಾದುಹೋಗುವ ದೃಶ್ಯಾವಳಿಗಳು ಸೆರೆಯಾಗಿದ್ದವು.

25. ಪೊಲೀಸರು ದೃಶ್ಯಾವಳಿಗಳನ್ನು ತೆಗೆದುಕೊಂಡಾಗ ನಾನು ನನ್ನ ಮನೆಯಲ್ಲಿಯೇ ಹೇಳಿಕೆಗಳನ್ನು ಕೊಟ್ಟಿರುತ್ತೇನೆ. ಪೊಲೀಸರು ಲ್ಯಾಪ್ ಟಾಪ್ ತಂದಿದ್ದರು. ಪೊಲೀಸರು ನನ್ನ ಹೇಳಿಕೆಯ ಪ್ರಿಂಟ್ ಔಟ್ ಅನ್ನು ನನ್ನ ಮನೆಯಲ್ಲಿಯೇ

ತೆಗೆದಿದ್ದಾರೆ. ಪೊಲೀಸರು ನನ್ನ ಹೇಳಿಕೆಯ ಪ್ರಿಂಟ್ ಔಟ್ ಅನ್ನು ಮನೆಯಲ್ಲಿಯೇ ತೆಗೆದಿದ್ದಾರೆ ಎಂದು ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ.

26. ನಿಪಿ 6 ರಲ್ಲಿ ಕಂಡುಬರುವ ವ್ಯಕ್ತಿಗಳನ್ನು ಹೊರತುಪಡಿಸಿ ಲಕ್ಷ್ಮಿಯ ಗಂಡ ಗಂಗಾರಾಮು ಕೂಡ ಆ ದಿವಸ ನನ್ನ ಮನೆಗೆ ಬಂದಿದ್ದರು. ಪೊಟೋ ತೆಗೆಯುವಾಗ ಗಂಗಾರಾಮು ಮನೆಯ ಕೆಳಗೆ ಇದ್ದರು.

27. ಪೊಲೀಸರು ದೃಶ್ಯಾವಳಿಗಳನ್ನು ಸಂಗ್ರಹಿಸಿದ ನಿಪಿ 5 ಪೆನ್‌ಡ್ರೈವ್ ಯಾವ ಕಂಪನಿಗೆ ಸೇರಿದ್ದೆಂದು ನಾನು ತಿಳಿದುಕೊಂಡಿಲ್ಲ. ಆ ದೃಶ್ಯಾವಳಿಯಲ್ಲಿ ಕಂಡುಬಂದ ಹೆಂಗಸನ್ನು ನಾನು ಅದಕ್ಕಿಂತ ಮೊದಲು ನಾನು ನೋಡಿರುವುದಿಲ್ಲ. ಆ ರೀತಿ ಹೋಗುತ್ತಿದ್ದ ಹೆಂಗಸು ಯಾರು ಎಂದು ಮುಖಚರ್ಯೆ ಕಾಣಿಸುತ್ತಿರಲಿಲ್ಲ ಎನ್ನುವುದು ಸರಿಯಲ್ಲ. ಮುಖ ಚರ್ಯೆ ಸ್ಪಷ್ಟವಾಗಿ ಕಾಣಿಸದಿದ್ದರೂ ಕೂಡ ಕಾಣಿಸುತ್ತಿತ್ತು ಎಂದು ಪೊಲೀಸರ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷ್ಯವನ್ನು ನುಡಿದಿದ್ದೇನೆ ಎನ್ನುವುದು ಸರಿಯಲ್ಲ.

28. ಬಜಾರ್ ಲೈನ್ ನ ಸುತ್ತಮುತ್ತ ಹಲವಾರು ವಾಸದ ಮನೆಗಳು ಇವೆ ಎನ್ನುವುದು ಸರಿ . ಅಲ್ಲಿ ವಾಸಿಸುವ ಜನ ಬೆಳಗಿನ ಜಾವ ವಾಯುವಿಹಾರಕ್ಕೆ ಓಡಾಡುತ್ತಾರೆ ಎನ್ನುವುದು ಸರಿ .

29. ಕೆ ಆರ್ ಎಸ್ ನಲ್ಲಿ ಭಾನುವಾರದ ದಿವಸ ಸಂತೆ ನಡೆಯುತ್ತದೆ. ಕೆ ಆರ್ ಎಸ್ ಸಂತೆಗೆ ತರಕಾರಿಗಳನ್ನು ತೆಗೆದುಕೊಂಡು ಸುಮಾರು ಗ್ರಾಮಗಳಿಂದ ತೆಗೆದುಕೊಂಡು ಬರುತ್ತಾರೆ ಎನ್ನುವುದು ಸರಿ . ಸಾಕ್ಷಿ ಸ್ವತಃ ಬಜಾರ್ ಲೈನ್ ರಸ್ತೆಯ ಮೂಲಕ ಯಾರು ತೆಗೆದುಕೊಂಡು ಬರುವುದಿಲ್ಲ ಎಂದು ಉತ್ತರಿಸಿದ್ದಾರೆ.

30. ನನ್ನ ಮನೆಯ ಮುಂದಿನ ರಸ್ತೆ ಹೊಂಗಳ್ಳಿಗೆ ಹೋಗುತ್ತದೆ ಎನ್ನುವುದು ಸರಿ . ಹೊಂಗಳ್ಳಿ ಗ್ರಾಮಸ್ಥರು ನನ್ನ ಮನೆಯ ಮುಂದಿನ ರಸ್ತೆಯಲ್ಲಿ ಓಡಾಡುತ್ತಾರೆ ಎನ್ನುವುದು ಸರಿ . ಸಾಕ್ಷಿ ಸ್ವತಃ ಇನ್ನೆರಡೂ ರಸ್ತೆಯಲ್ಲೂ ಕೂಡ ಓಡಾಡುತ್ತಾರೆ ಎಂದು ಉತ್ತರಿಸಿದ್ದಾರೆ.

31. ಸಿಸಿ ಕ್ಯಾಮೆರಾದ ಪೂಟೇಜ್ ನಲ್ಲಿ ಇದ್ದ ಹೆಂಗಸು ಆರೋಪಿ ಲಕ್ಷ್ಮಿ ಅಲ್ಲ ಎನ್ನುವುದು ಸರಿಯಲ್ಲ.

32. ನನಗೆ ಸತ್ಯ ಗೊತ್ತಿದ್ದರೂ ಕೂಡ ಪೊಲೀಸರ ಮಾತನ್ನು

ಕೇಳಿಕೊಂಡು ಫೂಟೇಜ್ ನಲ್ಲಿ ಇದ್ದ ಹೆಂಗಸು ಲಕ್ಷ್ಮೀ ಎಂದು ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ.

33.ನಾನು ಸ್ಥಳದಲ್ಲಿ ಇರದೇ ಇದ್ದ ಕಾರಣಕ್ಕಾಗಿ ಆ ದಿವಸ ನನ್ನ ಮನೆಗೆ ಬಂದ ವ್ಯಕ್ತಿಗಳು ಯಾರು ಎಂದು ನನಗೆ ತಿಳಿಸಲಾಗುತ್ತಿಲ್ಲ ಎನ್ನುವ ಸೂಚನೆ ಸರಿಯಲ್ಲ.

34. ಪೊಲೀಸರು ಸೃಷ್ಟಿಸಿದ ನಿಪಿ 6 ಫೋಟೋಕ್ಕೆ ಪೂರಕವಾಗಿ ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ .

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯ್ತು.

ಓ ಹೇ ಕೇ ಸರಿ ಇದೆ.

ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ (ಆಸೀನ ಶ್ರೀರಂಗಪಟ್ಟಣ)